ಪರಿಶೀಲನೆ ಎನ್ನುತ್ತಿದ್ದಾರೆ. ನಾವು ಇದರ ಬಗ್ಗೆ ಟೆಕ್ನಿಕಲಿ ಮಾತನಾಡಬೇಕೆಂದರೆ ಇದು ವಾಣಿವಿಲಾಸ ಸಾಗರಕ್ಕೆ ಸಂಬಂಧಪಟ್ಟಿದ್ದು ಆದರೂ ಕೂಡ ವಾಣಿವಿಲಾಸದ ನೀರು ನಮಗೆ ಬೇಕಾಗಿಲ್ಲ. ನಮ್ಮಲ್ಲಿ ರೀಜನರೇಟರ್ ಇದೆ, ಕೆನಾಲ್‌ಗಳು ಬರಬೇಕಾದರೆ ಆ ಹಳ್ಳಗಳು ರೀಜನರೇಟರ್‌ಗೂ ಅನುಕೂಲ ಆಗುತ್ತದೆ. ನಮಗೆ ತಿಳಿದಂತೆ, ಸುಮಾರು 45-48 ವರ್ಷಗಳಿಂದ ಆ ಹಳ್ಳದಲ್ಲಿ ನೀರಿದೆ. ಯಾರು ಈ ರೀತಿ ಮಾಡುತ್ತಿದ್ದಾರೋ ಎಂಬುದು ನನಗೆ ಗೊತ್ತಿಲ್ಲ. ದಯವಿಟ್ಟು ಎಕನಾಮಿಕಲಿ ಮಾತನಾಡಬೇಕೆಂದರೆ ಕೇವಲ ಹತ್ತು ಕೋಟಿ ರೂಪಾಯಿದಲ್ಲಿ ಎಂಟು ಸಾವಿರ ಎಕರೆಗೆ ನೀರಾವರಿ ಆಗುತ್ತದೆ. ಕೇವಲ ಹತ್ತು - ಹನ್ನೊಂದು ಸಾವಿರ ರೂಪಾಯಿ ಎಕರೆಗೆ ಖರ್ಚಾದಂತೆ ಆಗುತ್ತದೆ. ಇದಕ್ಕೆ ಮಾನ್ಯ ಸಚಿವರು ಉತ್ತರಿಸಬೇಕು.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಅದರಲ್ಲಿ ಎರಡು ವಿಚಾರಗಳನ್ನು ಬಹಳ ಪ್ರಧಾನವಾಗಿ ಯೋಚನೆ ಮಾಡಬೇಕಾದುದು ಎಂದರೆ ನೀರಿದೆಯೇ ಇಲ್ಲವೇ ಎನ್ನುವುದು. ಇದು ವೇದಾವತಿ ಸಬ್ ಬೇಸಿನ್‌ಗೆ ಸೇರಿರುವುದರಿಂದ ನಮ್ಮ ಕೃಷ್ಣಾ ಅವಾರ್ಡ್‌ನಲ್ಲಿ 42 ಟಿಎಂಸಿ ಆಗುವುದರಿಂದ ಅಲ್ಲಿ ನೀರು ಲಭ್ಯವಾಗುವುದು. ನಿಜ, ಇದು 6643 ಎಕರೆಗೆ ಆಗುತ್ತದೆ. 1993-94ರಲ್ಲಿ, ಎಕ್ಸಾಮಿನ್ ಮಾಡಿದ್ದಾರೆ. ನಾನು ಮತ್ತೆ ನನ್ನ ಸ್ನೇಹಿತರು ಬಂದು ನೋಡಿದ ಮೇಲೆ ಇಪ್ಪತ್ತು ದಿವಸಗಳ ಹಿಂದೆ ಮತ್ತೆ ರೀಎಕ್ಸಾಮಿನ್ ಮಾಡಬೇಕೆಂದು ಹೇಳಿದ್ದೇನೆ. ನಾನು ವಾಟರ್ ರಿಸೋರ್ಸ್ ಡೆವಲಪ್‌ಮೆಂಟ್‌ನವರಿಗೆ ಹೇಳಿ I will see that it is reexamined and also try to implement not this year, but next year.

ಶ್ರೀ ಎಂ.ದಿವಾಕರಬಾಬು:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಗೆ ಈ ಇರಿಗೇಷನ್ ಬಗ್ಗೆ ಹೇಳುವುದಾದರೆ ಅಲ್ಲಿ ಸಬ್ ಡಿವಿಜನ್ನೇ ಎತ್ತಿಬಿಟ್ಟಿದ್ದಾರೆ. ಅದನ್ನು ಎತ್ತಿದಮೇಲೆ ಲಿಫ್ಟ್ ಇರಿಗೇಷನ್ ಮಾಡುವುದು ಕಷ್ಟವಾಗುತ್ತಿವೆ. ಅಲ್ಲಿಂದ ಹದಿನೈದು ಸಾವಿರ ಎಕರೆಗೆ ಕಾಲುವೆಯನ್ನು ಮಾಡುವುದು ನಿಲ್ಲಿಸಿಬಿಟ್ಟಿದ್ದಾರೆ. ಆ ಸಬ್ ಡಿವಿಜನ್‌ನ್ನು ಎತ್ತಿದಮೇಲೆ ಅಲ್ಲಿ ವರ್ಕ್ ಪ್ರೋಗ್ರೆಸ್ ಆಗುತ್ತಿಲ್ಲ. ಆದ್ದರಿಂದ ತಕ್ಷಣ ಅವರು ಮತ್ತೆ ಸಬ್ ಡಿವಿಜನನ್ನು ಅಲ್ಲಿಯೇ ತರಬೇಕೆಂದು ತಮ್ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೇ, ಪರಿಶೀಲನೆ ಮಾಡೋಣ.

ವಿಷಯ:- ಆಲೂರು ಸಿದ್ಧಾಪುರ ಗ್ರಾಮದಲ್ಲಿ ಪೊಲೀಸ್ ಠಾಣೆಯ ಸ್ಥಾಪನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 188 (1212)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ):- ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಆಲೂರು ಸಿದ್ಧಾಪುರ ಗ್ರಾಮದಲ್ಲಿ ಆರಕ್ಷಕ ಠಾಣೆ ಮಂಜೂರಾತಿಗಾಗಿ ಹಲವಾರು ಮನವಿಗಳು ಬಂದಿರುವುದು ನಿಜವೇ?

ಆ) ಈ ಗ್ರಾಮದಲ್ಲಿ ಆರಕ್ಷಕ ಠಾಣೆಯನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳುವರೇ?

ಶ್ರೀ ಆರ್.ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):-

ಅ) ಆರಕ್ಷಕ ಠಾಣೆಗಾಗಿ ಮನವಿಗಳು ಬಂದಿಲ್ಲ. ಆದರೆ ಹೊರಠಾಣೆಗಾಗಿ ಮನವಿಗಳು ಬಂದಿವೆ.

ಆ) ಸದ್ಯದ ಪರಿಸ್ಥಿತಿಯಲ್ಲಿ ಆರಕ್ಷಕ ಠಾಣೆಯನ್ನಾಗಲೀ, ಹೊರಠಾಣೆಯನ್ನಾಗಲೀ ಮಂಜೂರು ಮಾಡಬೇಕಾದ ಅವಶ್ಯಕತೆ ಇಲ್ಲವೆಂದು ಪರಿಶೀಲನೆಯಿಂದ ತೀರ್ಮಾನಿಸಲಾಗಿದೆ.

ಶ್ರೀ ಎಂ.ಪಿ.ಅಪ್ಪಚ್ಚುರಂಜನ್:- ಮಾನ್ಯ ಅಧ್ಯಕ್ಷರೇ, ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಆಲೂರು ಸಿದ್ಧಾಪುರ ಗ್ರಾಮದಲ್ಲಿ ಆರಕ್ಷಕ ಠಾಣೆ ಮಂಜೂರಾತಿಗಾಗಿ ಹಲವಾರು ಮನವಿಗಳು ಬಂದಿರುವುದು ನಿಜವೇ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅವರು ಆರಕ್ಷಕ ಠಾಣೆಗಾಗಿ ಮನವಿಗಳು ಬಂದಿರುವುದಿಲ್ಲ ಎಂದು ಹೇಳಿ, ಆದರೆ ಹೊರಠಾಣೆಗಾಗಿ ಮನವಿಗಳು ಬಂದಿವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಆರಕ್ಷಕ ಠಾಣೆಯನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳುವರೇ ಎಂದಿದ್ದಕ್ಕೆ ''ಸದ್ಯದ ಪರಿಸ್ಥಿತಿಯಲ್ಲಿ ಆರಕ್ಷಕ ಠಾಣೆಯನ್ನಾಗಲಿ, ಹೊರಠಾಣೆಯನ್ನಾಗಲೀ ಮಂಜೂರು ಮಾಡಬೇಕಾದ ಅವಶ್ಯಕತೆ ಇಲ್ಲವೆಂದು ಪರಿಶೀಲನೆಯಿಂದ ತೀರ್ಮಾನಿಸಲಾಗಿದೆ'' ಎಂದು ಉತ್ತರ ಕೊಟ್ಟಿದ್ದಾರೆ. ತಾವು ಜನಸಂಖ್ಯೆ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತೀರೋ? ಅಥವಾ ಮೊಕದ್ದಮೆಯ ದಾಖಲೆಯ ಆಧಾರದ ಮೇಲೆ ಹೊರಠಾಣೆಯನ್ನು ತೆಗೆದುಕೊಳ್ಳುತ್ತೀರೋ ಅಥವಾ ದೂರಿನ ಆಧಾರದಮೇಲೆ ತೆಗೆದುಕೊಳ್ಳುತ್ತೀರೋ ಎಂಬುದಕ್ಕೆ ಉತ್ತರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಆಲೂರು ಸಿದ್ಧಾಪುರ, ಮಾಲಂಬಿ, ಅಂಕನಹಳ್ಳಿ, ಮಳ್ಳೂರು, ಜಾಗೇನಹಳ್ಳಿ, ಗೋಣಿಮರೂರು ಚಿಕ್ಕಗಣಗಾಲು ಸಾಧಾರಣ 12 ಗ್ರಾಮಗಳು ಈ ವ್ಯಾಪ್ತಿಗೆ ಬರುತ್ತದೆ. ಮತ್ತೆ ಒಂದು ಠಾಣೆಯಿಂದ ಇನ್ನೊಂದು ಠಾಣೆಗೆ 12 ಕಿಲೋಮೀಟರ್ ಆಗುತ್ತದೆ. ಅದರಿಂದ ಆರಕ್ಷಕ ಠಾಣೆಯನ್ನು ತೆಗೆಯಬೇಕೆಂದು ತಮ್ಮ ಮೇಲೆ ಒತ್ತಾಯ ಹಾಕುತ್ತೇನೆ. ಅಲ್ಲದೆ 25ರಿಂದ 30 ಸಾವಿರ ಜನಸಂಖ್ಯೆ ಕೂಡ ಇದೆ. ಅದರ ಜೊತೆಗೆ ಹಾಸನ ಗಡಿ ಪ್ರದೇಶವಾದ್ದರಿಂದ ಪದೇ ಪದೇ ಅಲ್ಲಿ ಕಳ್ಳಭಟ್ಟಿ ಮತ್ತು ಮರದ ಕಳುವು ಪ್ರಕರಣಗಳು ಹೆಚ್ಚು ಬರುತ್ತಿವೆ. ಆ ದೃಷ್ಟಿಯಿಂದ ಆದರೂ ಅಲ್ಲಿ ಹೊರಠಾಣೆಯನ್ನು ಕೊಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಆರ್.ರೋಷನ್ ಬೇಗ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಅಪ್ಪಚ್ಚುರವರು ಕೇಳಿರುವುದು ಆಲೂರು ಸಿದ್ಧಾಪುರ ಪಿಲೇಜ್ ಸೋಮವಾರಪೇಟೆ ತಾಲ್ಲೂಕಿನಲ್ಲಿ ಒಂದು ಪೋಲೀಸ್ ಸ್ಟೇಷನ್ ಅಥವಾ ಒಂದು ಔಟ್‌ಪೋಷ್ಟ್ ಕೊಡಿ ಎಂದು ಕೇಳಿದ್ದಾರೆ. ಇದಕ್ಕೆ ಮುಂಚೆ ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಅಲ್ಲಿ ಒಂದು ಔಟ್‌ಪೋಸ್ಟ್‌ನ್ನು ಕೊಡಬೇಕೆಂದು ಒಂದು ಕಾಗದವನ್ನು ಬರೆದಿದ್ದರು. ಆಲೂರು ಸಿದ್ಧಾಪುರ, ಶನಿವಾರ ಸಂತೆ ಪೋಲೀಸ್ ಸ್ಟೇಷನ್ ಲಿಮಿಟ್‌ನಲ್ಲಿ ನಾವು it is hardly 13 Kms from Shanivara Santhe; population covered by the police is only 32,338, distributed over 52 villages. No.of cases registered annually between 1993-1995. 1993ರಲ್ಲಿ ಐಪಿಸಿ ಆಫೆನ್ಸಸ್ 99. 1994ರಲ್ಲಿ ಐ.ಪಿ.ಸಿ. ಆಫೆನ್ಸ್‌ಸ್ 138, 1995ರಲ್ಲಿ ಐಪಿಸಿ ಆಫೆನ್ಸಸ್ 144, ಅದರ್ ಕೇಸಸ್ 1993ರಲ್ಲಿ 21, 94ರಲ್ಲಿ 50, 1995ರಲ್ಲಿ 36, ಶನಿವಾರ ಸಂತೆ ಪೋಲೀಸ್ ಸ್ಟೇಪನ್ ಜೊತೆಗೆ ಈಗ ಇನ್ನೊಂದು ಪೋಲೀಸ್ ಸ್ಟೇಷನ್‌ನಲ್ಲಿ ಒಂದು ಅಡಿಷನಲ್ ನಾಲ್ಕು ಹೆಡ್ ಕಾನ್ಸ್‌ಟೆಬಲ್ಸ್, 12 ಪೋಲಿಸ್ ಕಾನ್ಸ್‌ಟೆಬಲ್ಸ್‌ಗಳನ್ನು ಕೊಟ್ಟಿದ್ದೇವೆ, ಶನಿವಾರಸಂತೆ ಪೋಲೀಸ್ ಸ್ಟೇಷನ್‌ಗೆ to strengthen the police Station. ಈಗ ಹೊಸ ಔಟ್‌ಪೋಸ್ಟ್ ಆಗಲಿ, ಹೊಸ ಪೋಲೀಸ್ ಸ್ಟೇಷನ್ ಆಗಲಿ ಅಗತ್ಯ ಇಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಅಪ್ಪಚ್ಚು ರಂಜನ್:- ಮಾನ್ಯ ಅಧ್ಯಕ್ಷರೇ, ನೀವು ಜನಸಂಖ್ಯೆಯ ಅಧಾರದ ಮೇಲೆ ಆರಕ್ಷಕ ಠಾಣೆಯನ್ನು ತೆಗೆಯುತ್ತೀರೋ ಅಥವಾ ಮೊಕದ್ದಮೆಯ ಆಧಾರದ ಮೇಲೆ ತೆಗೆಯುತ್ತೀರೋ ಅಥವಾ ದೂರಿನ ಆಧಾರದ ಮೇಲೆ ತೆಗೆಯುತ್ತೀರೊ ಎಂದು ತಮ್ಮನ್ನು ಕೇಳಿದ್ದೇನೆ. ಅದಕ್ಕೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಮೊದಲು ಒಂದೂವರೆ ತಿಂಗಳ ಹಿಂದೆ ಮೂರು ಕೊಲೆ ಪ್ರಕರಣಗಳು ಕೂಡ ಅಲ್ಲಿ ನಡೆದಿದೆ. ಅದರಿಂದ ಸರ್ಕಾರಿ ಅರಣ್ಯ ಇಲಾಖೆಯ ಜೀಪೊಂದನ್ನು ಕೂಡ ಸುಟ್ಟು ಹಾಕಿದ್ದಾರೆ. ಅದರಿಂದಾಗಿ ಅಲ್ಲಿ ಒಂದು ಹೊರಠಾಣೆಯನ್ನಾದರೂ ಕೊಡಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಅಧ್ಯಕ್ಷರು:- ಅವರು ಕ್ರೈಟೇರಿಯಾ ಏನು ಎಂದು ಕೇಳುತ್ತಾರೆ. ಕ್ರೈಟೇರಿಯಾ ಡಿಸ್ಟೆನ್ಸಾ? ಪಾಪ್ಯುಲೇಷನ್ನಾ? ನಂಬರ್ ಆಫ್ ಅಫೆನ್ಸಸ್‌ಸಾ? ಪೋಲೀಸ್ ಠಾಣೆಯನ್ನು ಪ್ರಾರಂಭ ಮಾಡುವುದಕ್ಕೆ ಏನು ಕ್ರೈಟೇರಿಯಾ ಎಂದು ಏನು ಕೇಳುತ್ತಾರೆ.

ಶ್ರೀ ಆರ್.ರೋಷನ್ ಬೇಗ್:- ಮಾನ್ಯ ಅಧ್ಯಕ್ಷರೇ, the criteria is, one is population and the 2nd is crime ಕ್ರೈಮ್ ರೇಟ್ ಜಾಸ್ತಿ ಏನಾದರೂ ಇದ್ದು, ಪಾಪ್ಯುಲೇಷನ್ ಅಷ್ಟು ಹೆಚ್ಚು ಇಲ್ಲ ಎಂದರೂ ಕ್ರೈಮ್ ರೇಟ್ ಜಾಸ್ತಿ ಇದ್ದರೆ if we feel it necessary, ಒಂದು ಪೋಲೀಸ್ ಸ್ಟೇಷನ್ ಮಾಡಬೇಕೆಂದು ಇದೆ.

ಇಲ್ಲಿ ನಾವು ಸ್ವಡಿ ಮಾಡುತ್ತೇವೆ. ಮೊನ್ನೆ ಏನು ಕ್ರೈಮ್ ರೇಟ್ ಎಲ್ಲಾ ಆಗಿದೆ. ಜೀಪು ಎಲ್ಲಾ ಸುಟ್ಟಿದ್ದಾರೆ, ಮತ್ತು ಮರ್ಡರ್ ಆಗಿದೆ ಎಂದು ಹೇಳಿದ್ದಾರೆ. ಅದನ್ನೆಲ್ಲ ಎಕ್ಸಾಮಿನ್ ಮಾಡಿ ಅಲ್ಲಿ ಔಟ್‌ಪೋಸ್ಟ್ ಆಗಬೇಕಾಗಿದ್ದರೆ ನಾವು ಖಂಡಿತವಾಗಿಯೂ ಅದನ್ನು ಮಾಡುತ್ತೇನೆ.

ವಿಷಯ:- ಚಿಕ್ಕಮಗಳೂರು ನಗರದಲ್ಲಿ ಪೋಲೀಸ್ ಉಪ ಠಾಣೆ ಪ್ರಾರಂಭ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 189 (1065)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಂಗಳೂರು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಚಿಕ್ಕಮಗಳೂರು ನಗರದಲ್ಲಿನ ಗೃಹ ಮಂಡಳಿ ಬಡಾವಣೆಯಲ್ಲಿ ಒಂದು ಆರಕ್ಷಕ ಉಪ ಠಾಣೆ ಪ್ರಾರಂಭ ಮಾಡುವ ಬಗ್ಗೆ ಸರ್ಕಾರದವರಿಗೆ ಪ್ರಸ್ತಾವನೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ರೋಷನ್‌ಬೇಗ್ (ಗೃಹ ರಾಜ್ಯ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ಕ್ಷಮೆ ಕೋರುತ್ತಾ ನನ್ನ ಪ್ರಶ್ನೆಗಳಿಗೆ ಸಮಂಜಸವಾದಂಥ ಉತ್ತರಗಳನ್ನು ಒದಗಿಸಿಕೊಡುವ ಬಗ್ಗೆ ಸರ್ಕಾರದವರು ಏಕೆ ಈ ರೀತಿಯಾಗಿ ಮಾಡುತ್ತಾರೆ ಎಂದು ನನಗೆ ಗೊತ್ತಾಗುವುದಿಲ್ಲ. ನಾನು ಈ ಗೃಹಮಂಡಲಿ ವ್ಯಾಪ್ತಿಯಲ್ಲಿ ಒಂದು ಪೋಲೀಸ್ ಉಪಠಾಣೆ ಬೇಕು ಎನ್ನುವ ನನ್ನ ಪ್ರಸ್ತಾವನೆ ಎರಡು ವರ್ಷದಿಂದ ಈ ಸರ್ಕಾರ ಎದುರು ಇದೆ. ಉಪಠಾಣೆ ಪ್ರಾರಂಭ ಮಾಡುವ ಬಗ್ಗೆ ಹಿಂದಿನ ಗೃಹಸಚಿವರು ನೂರು ಪೋಲೀಸ್ ಠಾಣೆಗಳನ್ನು ಈ ರಾಜ್ಯದಲ್ಲಿ ಪ್ರಾರಂಭ ಮಾಡುವಂಥ ಸಂದರ್ಭದಲ್ಲಿ ತಮ್ಮ ಬೇಡಿಕೆಯನ್ನು ಈಡೇರಿಸಲಾಗುವುದು ಎಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಇವರು ಪ್ರಸ್ತಾವನೆಯೆ ಎದುರುಗಡೆ ಇಲ್ಲ ಎಂದರೆ ನಾನೇನು ಮಾಡಲಿ? ಏನು ಪ್ರಶ್ನೆ ಕೇಳುವುದಕ್ಕಾಗುತ್ತದೆ? ಜೊತೆಗೆ ಇವತ್ತು ಗೃಹಮಂಡಲಿಯವರು ಹೇಳುತ್ತಾರೆ, ಹೆಚ್ಚುಕಡಿಮೆ 800 ಮನೆಗಳನ್ನು ನಾವು ಅಲ್ಲಿ ನಿರ್ಮಿಸಿದ್ದೇವೆ. ಈಗ ಅಲ್ಲಿ ವಾಸಿಸುತ್ತಿರುವ ಜನರಿಗೆ ಬಹಳ ಸ್ತರದಲ್ಲಿ ತಾಪತ್ರಯಗಳು ಉಂಟಾಗಿವೆ. ಕಳ್ಳತನದ ಭಯ, ಜೊತೆಗೆ ಎರಡು ಮೂರು ಕಾಲೇಜುಗಳಿವೆ ಅಲ್ಲಿ. ತಾಂತ್ರಿಕ ವಿದ್ಯಾಸಂಸ್ಥೆ, ಎಐಟಿ ಕಾಲೇಜು ಇದೆ, ನಮ್ಮ ಗೌರ್ನಮೆಂಟ್ ಕಾಲೇಜು ಇದೆ, ಜೋಸೆಫ್ ವಿದ್ಯಾರ್ಥಿಗಳ ಪ್ರೌಢ ಶಾಲೆಗಳು ಇವೆ. ಜೊತೆಗೆ ಆ ಬಡಾವಣೆಯ ನಾಗರೀಕರು ಈ ಮನೆಗಳಲ್ಲಿ ವಾಸವಿದ್ದು ಹೆಚ್ಚಿನ ಜನಸಂಖ್ಯೆಯಲ್ಲಿ ಜನರು ಅಲ್ಲಿ ವಾಸಿಸುತ್ತಿದ್ದಾರೆ. ಅಲ್ಲಿ ಸಾರ್ವಜನಿಕರ ಪರವಾಗಿ ಬೇಡಿಕೆ ಇಟ್ಟಿರುವಂತಹದು ಸರ್ಕಾರದ